**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN ; U40109KA2004SGC035177
ನೊಂದಾಯಿತಕಛೇರಿ ವಿಳಾಸ ನಂ 29
ಕಾವೇರಿಗ್ರಾಮೀಣ ಬ್ಯಾಂಕ್‌ರಸ್ತೆ
ವಿಜಯನಗರ 2 ನೇಹಂತ ಮೈಸೂರು-570017

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ರವರಕಛೇರಿ ಕಾ ಮತ್ತು ಪಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಹುಣಸೂರು
Ph.: 08222 – 252056

ನಿಗಮ ಇ-ಮೇಲ್ :WWW.CESCMYSORE.ORG
email:aeehun@cescmysore.org

ಸಂಖ್ಯೆ:ಸಕಾನಿಇಂ(ವಿ)/ಹುಣ/ಸಇಂ(ತಾ)/2019-20/ ೨೫೫೩(೮)

ದಿನಾಂಕ: 23-9-19

ದಿನಾಂಕ 16-09-2019ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ) ಶ್ರೀ ಮುಜಾಮಿಲ್ ಅಕ್ಮದ್ ರವರ ಅಧ್ಯಕ್ಷತೆಯಲ್ಲಿ ನಡೆದ ಹುಣಸೂರು ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಮುಜಾಮಿಲ್ ಅಕ್ಮದ ರವರು, ಅಧೀಕ್ಷಕ ಇಂಜಿನಿಯರ್(ಪ್ರಭಾರ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು
2. ಶ್ರೀ ಸುನೀಲ್ ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು
3. ಶ್ರೀ ಸಿದ್ದಪ್ಪ ರವರು, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
4. ಶ್ರೀ ಆನಂದ.ಎಸ್, ಸಹಾಯಕ ಇಂಜಿನಿಯರ್(ವಿ)(ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು ಮತ್ತು ಪ್ರಭಾರ ಸಹಾಯಕ ಇಂಜಿನಿಯರ್ (ವಿ), ಪಟ್ಟಣ ಶಾಖೆ, ಹುಣಸೂರು
5. ಶ್ರೀ ಚನ್ನಕೇಶವ, ಕಿರಿಯ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ರತ್ನಪುರಿ ಶಾಖೆ ಮತ್ತು ಹನಗೂಡು ಶಾಖೆ
6. ಶ್ರೀ ತ್ಯಾಗರಾಜು ಕಿರಿಯ ಇಂಜಿನಿಯರ್ ಶಾಖಾಧಿಕಾರಿಗಳು ಬಿಲ್ಲುಂದ ಶಾಖೆ
7. ಶ್ರೀ ಮಂಜುನಾಥ್, ಕಿರಿಯ ಇಂಜಿನಿಯರ್ ಶಾಖಾಧಿಕಾರಿಗಳು ಗಾವಡಗೆರೆ ಶಾಖೆ
8. ಶ್ರೀ ಸುರೇಶ, ಕಿರಿಯ ಇಂಜಿನಿಯರ್ ಶಾಖಾಧಿಕಾರಿಗಳು ಗೋವಿಂಧನಳ್ಳಿ ಶಾಖೆ

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ) ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆಎಂದು ಸಭೆಗೆ ತಿಳಿಸಿದರು.

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಹುಣಸೂರು ರವರು ಮಾತನಾಡಿ ಈ ಹಿಂದಿನ ಜನ ಸಂಪರ್ಕ ಸಭೆಯಲ್ಲಿ ಚರ್ಚಿಸಿದ ಒಟ್ಟು 10 ಸಂಖ್ಯೆ ಸಮಸ್ಯೆಗಳಲ್ಲಿ 10 ಸಂಖ್ಯೆ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿದೆ.

Scanned with CamScanner

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ಕುಮಾರ್ ಯಮಗುಂಬ | ★ ಯಮಗುಂಬ ಗ್ರಾಮದ 25 ಕೆ.ವಿ.ಎ ಐ.ಪಿ ಪರಿವರ್ತಕವು ವಿಫಲಗೊಂಡಿದ್ದು ಬದಲಾಯಿಸಿಕೊಡಬೇಕೆಂದು ಕೋರಿದರು | ★ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ). ರವರು ಬಿಳ್ಕೆರೆ ಶಾಖಾಧಿಕಾರಿಗಳಿಗೆ ಪರಿವರ್ತಕ ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 2. | ಶ್ರೀ ಶಿವಣ್ಣ , ಮುತ್ತುರಾಯನ ಹೊಸಳ್ಳಿ | ★ ಮುತ್ತುರಾಯನ ಹೊಸಳ್ಳಿ ಗ್ರಾಮದ ಕುಮಾರ್ 63 63 ಕೆ.ವಿ.ಎ ಐ.ಪಿ ಪರಿವರ್ತಕದಲ್ಲಿ ನಂಬರ್ ಆಗದ ಐ.ಪಿಗಳಿದ್ದು ಅವುಗಳನ್ನು ತೆರೆವುಗೊಳಿಸಬೇಕೆಂದು ತಿಳಿಸಿರುತ್ತಾರೆ. | ★ ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ),ರವರು ಬಿಳ್ಕೆರೆ ಶಾಖಾಧಿಕಾರಿಗಳಿಗೆ ಕೂಡಲೆ ನಂಬರ್ ಆಗದ ಐ.ಪಿಗಳನ್ನು ಕಡಿತ ಮಾಡಿಸಿ ನಂಬರ್ ಮಾಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 3. | ಶ್ರೀ ನಟರಾಜು ಹುಣಸೂರು | ★ಹುಣಸೂರು ಕೋಟೆ ಸರ್ಕಲ್ ಬಳಿಯಿರುವ ಮಹಿಳ ಕಾಲೇಜು ಬಳಿ ಮರವು ವಿದ್ಯುತ್ ತಂತಿಗೆ ತಾಗುತ್ತಿರುತ್ತದೆ ಎಂದು ತಿಳಿಸಿರುತ್ತಾರೆ. | ★ ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ),ರವರು ಹುಣಸೂರು ಶಾಖಾಧಿಕಾರಿಗಳಿಗೆ ಕೂಡಲೆ ಮರವನ್ನು ತೆರೆವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 4. | ಶ್ರೀ ಮಹದೇವಪ್ಪ ಕಟ್ಟೆಮಳಲವಾಡಿ | ★ಗಂಗಾ ಕಲ್ಯಾಣ ಯೋಜನೆಯಡಿ ತಮಗೆ ಅಂದಾಜುಪಟ್ಟಿ ಆಗಿದ್ದು ಇನ್ನು ಕೆಲಸ ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. | ★ ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ),ರವರು ಗಾವಡಗೆರೆ ಶಾಖಾಧಿಕಾರಿಗಳಿಗೆ ಕೆಲಸ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 5. | ಶ್ರೀ ಖಲೀಲ ಪಾಷ ರತ್ನಪುರಿ | ★ ರತ್ನಪುರಿಯ ತಮ್ಮ ಮನೆಯ ಬಳಿಯಿರುವ ವಿದ್ಯುತ್ ಕಂಬವು ಸಂಪೂರ್ಣ ಶಿಥಿಲವಾಗಿರುತ್ತದೆ ಮತ್ತು ಅದನ್ನು ಬದಲಾಯಿಸಿಕೊಡಬೇಕೆಂದು ಕೇಳಿರುತ್ತಾರೆ. | ★ ರತ್ನಪುರಿ ಶಾಖಾಧಿಕಾರಿಗಳು ಮಾತನಾಡಿ ರತ್ನಪುರಿ ಯಲ್ಲಿ ಬೆಳಕು ಯೋಜನೆಯಡಿ ಕಾಮಗಾರಿ ನೆಡೆಯುತ್ತಿದ್ದು ಆ ಸಮಯದಲ್ಲಿ ಬದಲಾಯಿಸಿಕೊಡಲಾಗುವುದೆಂದು ಸೂಚಿಸಿದರು. |

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಚೇರಿ). ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ನಿಯಾಮನುಸಾರ ಕ್ರಮಕ್ಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ:- 10
ಮೌಖಿಕ ದೂರುಗಳ ಸಂಖ್ಯೆ:- 05
ಪತ್ರ ಲಿಖಿತ ದೂರುಗಳ ಸಂಖ್ಯೆ:- 00

ತಮ್ಮ ವಿಶ್ವಾಸಿ
ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಹುಣಸೂರು.

ಪು.ತಿ.ನೊ

Scanned with CamScanner

ಗಳು:-

1. ಮಾನ್ಯ ಅಧೀಕ್ಷಕಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನೋಡಲ್ಅಧಿಕಾರಿ 220 ಕೆವಿ ಸ್ವೀಕರಣಾ ಕೇಂದ್ರ, ಹೂಟಗಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.ಕಚೇರಿ ಪ್ರತಿ.
4. ಕಚೇರಿ ಪ್ರತಿ.

Scanned with CamScanner